ಈ ದಿನ ದಿಃ27.07.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಃ ಆರೋಪಿಯ ಪರ ಶ್ರೀ ಎಸ್ ಎನ್ ಎಂ ವಕೀಲರಿಂದ ಃ-

ನಾನು ಮೊದಲಿನಿಂದಲೂ ತರೀಕೆರೆ ಪಟ್ಟಣದ ವಾಸಿ ಎಂದರೆ ಸರಿ. ನನಗೆ ಆರೋಪಿಯ ಪರಿಚಯವಿಲ್ಲ ಆದರೆ ಅವರ ಗಂಡ ನನಗೆ 15 ವರ್ಷದಿಂದ ಪರಿಚಯ. ಆರೋಪಿಯ ಮನೆ ಕೋಡಿ ಕ್ಯಾಂಪ್‌ನಲ್ಲಿ ಇದ್ದು ನನ್ನ ಮನೆ ವಿನಾಯಕನಗರದಲ್ಲಿ ಇದ್ದು ಎರಡರ ನಡುವೆ 2 ಕಿ ಮೀ ಅಂತರವಿದೆ ಎಂದರೆ ಸರಿ. ನನ್ನ ತಂದೆಗೆ ಇಬ್ಬರು ಮಕ್ಕಳು. ನಾನು ಮತ್ತು ನನ್ನ ಸಹೋದರ ಕಳೆದ 8 ವರ್ಷಗಳ ಮುಂಚಿನಿಂದ ಪ್ರತ್ಯೇಕವಾಗಿ ವಾಸವಾಗಿದ್ದೇವೆ. ನನಗೆ ಮತ್ತು ನನ್ನ ಸಹೋದರನಿಗೆ ನನ್ನ ತಂದೆಯಿಂದ ತಲಾ 1 ವರೆ ಎಕರೆ ಜಮೀನು ಬಂದಿದೆ. ನನ್ನ ಜಮೀನಿನಲ್ಲಿ ಈಗ ಅಡಿಕೆ ಸಸಿ ನೆಟ್ಟಿರುತ್ತೇನೆ. ಈಗ್ಗೆ 3 ವರ್ಷಗಳಿಂದ ಸರ್ಕಾರ ನೀಡುವ ಪಡಿತರವನ್ನು ಪಡೆದುಕೊಳ್ಳುತ್ತಿದ್ದೇನೆ. ಅದಕ್ಕೂ ಮುಂಚೆ ನಾನು, ನನ್ನ ತಂದೆ ಮತ್ತು ನನ್ನ ಸಹೋದರ ಒಟ್ಟಿಗೆ ಇದ್ದಾಗ ಪಡಿತರವನ್ನು ಪಡೆಯುತ್ತಿದ್ದೆವು. ನನ್ನ ಕುಟುಂಬದ ಎಲ್ಲಾ ಸದಸ್ಯರನ್ನು ಸೇರಿಸಿ ಆ ಸಮಯದಲ್ಲಿ ಪಡಿತರ ಚೀಟಿ ಕೊಟ್ಟಿದ್ದರು ಎಂದರೆ ಸರಿ. ಸದರಿ ಪಡಿತರ ಚೀಟಿ ಬಿ.ಪಿ.ಎಲ್. ಪಡಿತರ ಚೀಟಿ ಎಂದರೆ ಸರಿ. ನಾನು ಸಹಃ ಈಗ ಬಿ.ಪಿ.ಎಲ್.ಪಡಿತರ ಚೀಟಿಯಲ್ಲಿ ಪಡಿತರವನ್ನು ಪಡೆಯುತ್ತಿದ್ದೇನೆ. ಬಿ.ಪಿ.ಎಲ್. ಪಡಿತರ ಚೀಟಿಯನ್ನು ಪಡೆಯಲು ರೂ.1,20,000/- ಆದಾಯಮಿತಿ ಮತ್ತು 7 ಎಕರೆ 20 ಗುಂಟೆ ಕೃಷಿ ಭೂಮಿ ಮಿತಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದಕ್ಕಿಂತ ಹೆಚ್ಚು ಆದಾಯ ಹೊಂದಿರುವವರಿಗೆ ಎ.ಪಿ.ಎಲ್. ಪಡಿತರ ಚೀಟಿ ನೀಡುತ್ತಾರೆ ಎಂದರೆ ಸರಿ.

2018 ರಲ್ಲಿ ನಾನು ಅಡಿಕೆ ಚೇಣಿ ವ್ಯವಹಾರ ಮಾಡುತ್ತಿದ್ದೆ. ನಾನು ಸದರಿ ವ್ಯವಹಾರ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಇಲ್ಲ. ದಿಃ12.11.2018 ಕ್ಕೆ 10-12 ದಿನಗಳ ಮೊದಲು ಆರೋಪಿಯ ಗಂಡ ನನ್ನ ಬಳಿ ಬಂದು ರೂ.8 ಲಕ್ಷ ಹಣವನ್ನು ಕೇಳಿರುತ್ತಾರೆ. ನಾನು ಸದರಿ ಹಣವನ್ನು ಹೊಂದಿಸಲು 15 ದಿವಸ ಕಾಲವಕಾಶ ನೀಡುವಂತೆ ಕೇಳಿರುತ್ತೇನೆ. ನನ್ನ ಬಳಿ ಅವರು ಹಣ ಕೇಳಿದ ದಿನ ಅಷ್ಟು ಹಣ ಇರಲಿಲ್ಲ. ನನ್ನ ಮನೆಯಲ್ಲಿ ಇದ್ದಂತಹಃ ಅಡಿಕೆ ಮಾರುಕಟ್ಟೆಗೆ ಮಾರಿ ಹಣವನ್ನು ಹೊಂದಿಸಿರುತ್ತೇನೆ. ನಾನು ಅಡಿಕೆ ಚೇಣಿ ಪಡೆದು ರೇಖೆ ಮಾಡಿದಂತಹಃ ಅಡಿಕೆಯನ್ನು ಮತ್ತು ಅಡಿಕೆಯನ್ನು ನೇರವಾಗಿ ಖರೀದಿ ಮಾಡಿ ಮಾರಾಟ ಮಾಡುತ್ತೇನೆ. 2018 ರಲ್ಲಿ ನಾನು ಎಷ್ಟು ಜನರ ಬಳಿ ಅಡಿಕೆ ಚೇಣಿ ಮಾಡಿರುತ್ತೇನೆ ಎಂದು ನನಗೆ ಹೇಳಲು ಆಗುವುದಿಲ್ಲ. ಅದೇ ರೀತಿ ನನಗೆ ಯಾರಿಂದ ಒಣ ಅಡಿಕೆಯನ್ನು ಖರೀದಿ ಮಾಡಿರುತ್ತೇನೆಂದು ಹೇಳಲು ಆಗುವುದಿಲ್ಲ. ಅಡಿಕೆ ಚೇಣಿ ಮಾಡಬೇಕಾದರೆ ಒಂದು ಡೈರಿಯನ್ನು ಎರಡೂ ಕಡೆ ವ್ಯಕ್ತಿಗಳು ಇಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸಹಃ ಯಾವುದೇ ಡೈರಿಯನ್ನು ಆ ಬಗ್ಗೆ ಇಟ್ಟುಕೊಂಡಿರುವುದಿಲ್ಲ. 2017-18 ರಲ್ಲಿ ಮಾಡಿದಂತಹಃ ಒಂದು ಚೇಣಿ ಚೀಟಿ ನನ್ನ ಬಳಿ ಇದೆ. ಸದರಿ ಚೇಣಿ ಚೀಟಿ ರವಿ ಎಂಬುವವರಿಗೆ ಸಂಬಂಧಪಟ್ಟದ್ದು. ಸದರಿ ಚೀಟಿಯನ್ನು ಹೊರತುಪಡಿಸಿ ಬೇರೆ ಯಾವುದೇ ಚೇಣಿ ಚೀಟಿ ನಾನು ಇಟ್ಟುಕೊಂಡಿಲ್ಲ.

ರೈತರಿಗೆ ಮುಂಗಡವಾಗಿ ಹಣ ಕೊಟ್ಟು ಚೇಣಿ ಚೀಟಿಯನ್ನು ಮಾಡಿಸಿಕೊಳ್ಳುತ್ತಾರೆ ಎಂದರೆ ಸರಿ. 2016-17 ನೇ ಸಾಲಿನಲ್ಲಿ ಹತ್ತಿಗನಾಳು ಗ್ರಾಮದ ವೆಂಕಟೇಶ್ ರವರ ತೋಟದಲ್ಲಿ ನಾನು ಅಡಿಕೆ ಚೇಣಿ ಮಾಡಿರುತ್ತೇನೆ. ನಾನು ಬೇರೆಯವರ ಅಡಿಕೆ ಚೇಣಿಯನ್ನು ಮಾಡಿದ್ದು ಅವರ ಹೆಸರನ್ನು ಹೇಳುವುದು ಬೇಡ ಎಂದು

ಹೇಳುತ್ತಿರುವುದಿಲ್ಲ. ಆರೋಪಿಯ ಗಂಡ ಹಂದಿ ವ್ಯವಹಾರ ಮಾಡುತ್ತಿದ್ದರು. ಆರೋಪಿಯ ಗಂಡ ತನಗೆ ಬೇರೆ ಕಡೆ ಸಾಲ ಇರುತ್ತದೆ ಎಂದು ನನ್ನ ಬಳಿ ಹಣ ಪಡೆದಿರುತ್ತಾರೆ. ನಿಪಿ1 ರ ಹಣವನ್ನು ನಾನು ನನ್ನ ಮನೆಯಲ್ಲಿ ಕೊಟ್ಟಿರುತ್ತೇನೆ. ಸದರಿ ಹಣವನ್ನು ನೀಡುವಾಗ ಆರೋಪಿ ಮತ್ತು ಅವರ ಗಂಡ ಇಬ್ಬರು ಬಂದಿದ್ದರು. ಹಣ ಕೊಡುವಾಗ ನನ್ನ ಮನೆಯಲ್ಲಿ ನಾನು ಮಾತ್ರ ಇದ್ದೆ.

2013 ರಲ್ಲಿ ನನ್ನ ಪತ್ನಿ ತರೀಕೆರೆ ಪುರಸಭೆಗೆ ಸದಸ್ಯರಾಗಿ ಆಯ್ಕೆಯಾಗಿದ್ದರು. ಆ ಸಮಯದಲ್ಲಿ ಆರೋಪಿಯು ಸಹಃ ಅವರ ಕ್ಷೇತ್ರದಿಂದ ಸದಸ್ಯರಾಗಿ ಆಯ್ಕೆಯಾಗಿದ್ದರು ಎಂದರೆ ಸರಿ. ಸದರಿ ಸಾಲಿನ 60 ತಿಂಗಳ ಅವಧಿಯಲ್ಲಿ ಎಷ್ಟು ಜನ ಸದಸ್ಯರು ಅಧ್ಯಕ್ಷರಾಗಿ ಕೆಲಸ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯು ಅಂತಿಮವಾಗಿ 2 ತಿಂಗಳು ಅಧ್ಯಕ್ಷರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅವಧಿಯಲ್ಲಿ 12 ರಿಂದ 13 ಜನ ಸದಸ್ಯರು ಅಧ್ಯಕ್ಷರಾಗಿ ಕೆಲಸ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ನೀಡುವಂತೆ ಕೋರಿದ್ದು, ಅನುಮತಿ ನೀಡಿ ಮುಂದಿನ ಮುದ್ದತ್ತಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

sd/xxx

(ಸಂತೋಷ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.